## ಪ್ರತಿ ವರ್ಷ ಹೊಸ ಧಾರಾವಾಹಿ ಬರಲಿ

ಟಿವಿ ವೀಕ್ಷಕರ ಬಗ್ಗೆ ಕಾಳಜಿಯೇ ಇಲ್ಲ ಎಂಬುದು ಸ್ಪಷ್ಟ. ಅವರಿಗೆ ಒಂದು ಕಾರ್ಯಕ್ರಮವನ್ನು ಹೇಗೆ ಮುಗಿಸಬೇಕೆಂಬುದು ತಿಳಿಯದ ವಿಷಯ. ಝೀ ಕನ್ನಡದ ಕುಟುಂಬ ಪ್ರಶಸ್ತಿ ಸಮಾರಂಭದಲ್ಲಿ ಕಲಾವಿದರೇ 'ಕಳೆದ ಬಾರಿ ಅತ್ತೆ, ಈ ಬಾರಿ ಅಜ್ಜಿಯ ಪ್ರಶಸ್ತಿ ಬಂದಿದೆ' ಎಂದು ಹೇಳಿ ಸಂತಸ ವ್ಯಕ್ತಪಡಿಸಿದ್ದರು. ವರ್ಷಗಳೇ ಉರುಳಿದರೂ ಹೊಸ ಧಾರಾವಾಹಿ ಹುಟ್ಟಿಕೊಳ್ಳುವುದಿಲ್ಲ. ಒಮ್ಮೆ ಒಬ್ಬ ನಟ ಮಗುವಿನ ಪಾತ್ರದಲ್ಲಿ ಕಾಣಿಸಿಕೊಂಡರೆ ಪ್ರತಿ ವರ್ಷ ಅವನಿಗೆ ಮಗ, ಮೊಮ್ಮಗ, ತಂದೆ, ತಾತ ಹೀಗೆ ಎಲ್ಲಾ ರೀತಿಯ ಪ್ರಶಸ್ತಿಗಳು ಖಚಿತ ಎನ್ನುವಂತಾಗಿದೆ. ವೀಕ್ಷಕ ಮುಂದೇನಾಗುತ್ತದೆ ಎಂಬ ಕುತೂಹಲದ ಕಣ್ಣಿನಲ್ಲಿ ಟಿ.ವಿ. ಮುಂದೆ ಕುಳಿತರೆ ಕಥೆ ಇಲ್ಲದೆ ಸುಮ್ಮನೆ ಬೆಳೆಯುತ್ತಾ ಹೋಗುತ್ತದೆ.

ಬಡಪಾಯಿ ವೀಕ್ಷಕರನ್ನು ಮಾನಸಿಕ ಹಿಂಸೆಯಿಂದ ಕೊಲ್ಲುತ್ತಾರೆ. ಇದು ವೀಕ್ಷಕ ಯಾರ ಬಳಿಯೂ ಹೇಳಿಕೊಳ್ಳಲಾಗದ ಒಂದು ರೀತಿಯ ಮಾನಸಿಕ ತೊಳಲಾಟ. ಧಾರಾವಾಹಿಯನ್ನು ಒಂದು ವರ್ಷ ಪ್ರಸಾರ ಮಾಡಿ ಅದಕ್ಕೆ ತಕ್ಕಂತೆ ಪ್ರಶಸ್ತಿ ಪ್ರದಾನ ಮಾಡಿ. ಬರುವ ವರ್ಷ ಹೊಸ ಧಾರಾವಾಹಿ ನಿರ್ಮಿಸಿ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಿದರೆ ಅದಕ್ಕೊಂದು ಅರ್ಥ ಬರುತ್ತದೆ. ಇಲ್ಲದಿದ್ದರೆ ಇರುವ ಅದೇ ನಟ ನಟಿಯರಿಗೆ ಪ್ರತಿ ವರ್ಷ ಒಂದು ಪ್ರಶಸ್ತಿ ಕೊಡಲಾಗುತ್ತದೆ. ಹೀಗೆ ಮಾಡುವುದರಿಂದ ಪುರಸ್ಕಾರಕ್ಕೆ ಇರುವ ಗೌರವ ಇಲ್ಲದಂತಾಗುತ್ತದೆ. ಈ ಬಗ್ಗೆ ಎಚ್ಚರ ವಹಿಸುವುದು ಅಗತ್ಯ.

—ಎನ್.ಎಸ್. ಚಂದ್ರಶೇಖರ, ಬೆಂಗಳೂರು

## ಬಿಗ್ ಬಾಸ್ ಕನ್ನಡ ಬಳಕೆ ಯಾಗಲಿ

ಕನ್ನಡ ಭಾಷೆಯನ್ನೆ ಬಳಸಬೇಕೆಂಬುದು 'ಬಿಗ್ ಬಾಸ್'ನ ನಿಯಮಾವಳಿಗಳಲ್ಲಿ ಒಂದು. ಈಗಾಗಲೇ ಮನೆಯ ಒಳಗೆ ಇರುವವರಿಗೆ ಕನ್ನಡವನ್ನೇ ಬಳಸಬೇಕೆಂಬ ಎಚ್ಚರಿಕೆಯನ್ನು ಬಿಗ್‌ಬಾಸ್ ನೀಡಿದೆ. ಆದರೂ ಅಲ್ಲಿಯ ಆಟಗಾರರು ಬಿಗ್‌ಬಾಸ್‌ನ ಎಚ್ಚರಿಕೆಗೆ ಕಿವಿಗೊಟ್ಟಂತೆ ತೋರುವುದಿಲ್ಲ.

ಬಿಗ್‌ಬಾಸ್ ಕೂಡ ಸೂಚನೆಗಳನ್ನು ನೀಡುವಾಗ ಸಂಪೂರ್ಣ ಕನ್ನಡವನ್ನೇ ಬಳಸಲಿ. ಕುಕಿಂಗ್ ಗ್ಯಾಸ್ ಅನ್ನುವ ಬದಲು 'ಅಡಿಗೆ ಅನಿಲ' ಎಂದು ಬಳಸಿದರೆ ಸ್ಪರ್ಧಾಳುಗಳಿಗೆ ಅದೂ ಒಂದು ಎಚ್ಚರಿಕೆ ಆಗುತಿತ್ತು! ಕನ್ನಡದ ಬಹುತೇಕ ಧಾರಾವಾಹಿಗಳಲ್ಲಿ ಆಂಗ್ಲ ಭಾಷೆಯ ಹಾವಳಿ ಹೆಚ್ಚಾಗುತ್ತಿರುವುದು ಸಾಮಾನ್ಯ. ಕನ್ನಡದ ಬಗ್ಗೆ ನಾವು ಎಚ್ಚರ ವಹಿಸ ಬೇಕಾಗಿದೆ. 'ಕನ್ನಡ ಬೆಳಸಿ ಕನ್ನಡ ಉಳಿಸಿ' ಎನ್ನುವದಕ್ಕಿಂತ 'ಕನ್ನಡ ಬಳಸಿ ಕನ್ನಡ ಬೆಳಸಿ' ಎನ್ನುವಂತಾಗಲಿ. ಅಂತೆಯೇ ಬಿಗ್‌ಬಾಸ್‌ನ ನಿಯಮಕ್ಕನುಗುಣವಾಗಿ ಮನೆಯಲ್ಲಿ 'ಕನ್ನಡ ಬಳಸಿ ಕನ್ನಡ ಬೆಳಸಿ' ಎನ್ನುವ ಮಾತು ಅರ್ಥವನ್ನು ಕಂಡುಕೊಳ್ಳುವಂತಾಗಲಿ.

-ಬೀರಣ್ಣ ನಾಯಕ ಮೊಗಟಾ

ವಾರದ ಪತ್ರ

## ಲಜ್ಜೆ ಇರಲಿ

ಧಾರಾವಾಹಿಗಳಲ್ಲಿ ತೋರಿಸುವ ಕೆಲವು ನಿರ್ದಿಷ್ಟ ದೃಶ್ಯಗಳು ಮುಜುಗರ ಹುಟ್ಟಿಸುತ್ತವೆ. ಅದರಲ್ಲೂ ಕುಟುಂಬದವರೆಲ್ಲ ಒಟ್ಟಿಗೆ ಕುಳಿತು ನೋಡುವ ಧಾರಾವಾಹಿಗಳಲ್ಲಿ ಅಂತಹ ದೃಶ್ಯ ಉಚಿತವಲ್ಲ. ಕೆಲವು ದೃಶ್ಯಗಳ ಝೂಮ್ ದೃಶ್ಯಗಳು, ದೇಹದ ಕೆಲವು ಭಾಗಗಳನ್ನೇ ಫೋಕಸ್ ಮಾಡುವುದು, ಆ ನಟ, ನಟಿಯರ ಸಿನಿಮಾ ಎಂಟ್ರಿಗೆ ದಾರಿಯಾದೀತು ಎಂಬುದು ಸತ್ಯ. ಮಕ್ಕಳು ಹಿರಿಯರ ಜತೆ ನೋಡುತ್ತಿದ್ದರೆ ಕಸಿವಿಸಿ ಎನಿಸುತ್ತದೆ. ಮಕ್ಕಳಲ್ಲಿ ಅದರ ಪರಿಣಾಮ ಭವಿಷ್ಯದಲ್ಲಿ ಖಂಡಿತ ಕೆಟ್ಟದ್ದಾಗಿರುತ್ತವೆ. ಧಾರಾವಾಹಿ ಆರೋಗ್ಯಕರವಾಗಿರಲಿ.

—ಪ್ರೊ. ಮಧೂರು ಮೋಹನ ಕಲ್ಲೂರಾಯ, ಬೆಳ್ತಂಗಡಿ

## ಸದಭಿರುಚಿಯ ಭಾವಧಾರೆ

ಪ್ರತಿ ಶನಿವಾರ ಮತ್ತು ಭಾನುವಾರ ದಿಗ್ವಿಜಯ ವಾಹಿನಿಯಲ್ಲಿ ಕೃಷ್ಣೇಗೌಡ ಅವರು ನಡೆಸಿಕೊಡುವ ಭಾವಧಾರೆ ಕಾರ್ಯಕ್ರಮ ಅತ್ಯುತ್ತಮವಾಗಿ ಮೂಡಿ ಬರುತ್ತಿದೆ. ಕನ್ನಡದ ಉತ್ತಮ ಪದ್ಯಗಳು, ಭಾವಗೀತೆಗಳನ್ನು ವಾಚಿಸಿ ಹಾಡಿಸುವುದರೊಂದಿಗೆ, ಕೃಷ್ಣೇಗೌಡರ ನಿರೂಪಣೆಯೂ ಚೇತೋಹಾರಿಯಾಗಿದೆ. ಬರಿ ಹಾಸ್ಯ ಕವಿಗಳಲ್ಲದೆ ಇತರ ಕವಿಗಳನ್ನೂ ಆಹ್ವಾನಿಸಿ ಕಾರ್ಯಕ್ರಮಕ್ಕೆ ಹೊಸ ಚೈತನ್ಯವನ್ನುಂಟು ಮಾಡಬಹುದು. ಒಟ್ಟಿನಲ್ಲಿ ಸದಭಿರುಚಿ ಬೆಳೆಸುವ ಕಾರ್ಯಕ್ರಮ.

-ಪ್ರೊ. ಎಂ.ಎಸ್. ರಘುನಾಥ್, ಬೆಂಗಳೂರು

## ಯಾವ ರಾಮಾಯಣವಿದು?

ಸರಳ ಜೀವನದಲ್ಲಿ ಪ್ರಸಾರವಾಗುತ್ತಿರುವ 'ಸೀತೆ- ಲೋಕಮಾತೆ' ಧಾರಾವಾಹಿಯಲ್ಲಿ ಕೆಲವು ದಿನಗಳ ಹಿಂದೆ ಹೀಗೊಂದು ದೃಶ್ಯ ಪ್ರಸಾರವಾಯಿತು. ಸುಗ್ರೀವ ಶ್ರೀರಾಮನ ಸಖ್ಯ ಬಯಸಿ ಬಂದಿದ್ದಾನೆ. ಶ್ರೀರಾಮನೂ ಸಹಾಯ ಹಸ್ತ ನೀಡಲು ಒಪ್ಪಿದ್ದಾನೆ. ಆಗ ಸುಗ್ರೀವ ಅಗ್ನಿ ಪ್ರತಿಷ್ಠಾಪಿಸಿ ಶ್ರೀರಾಮನ ಕೈ ಹಿಡಿದುಕೊಂಡು, ಅಗ್ನಿಗೆ ಪ್ರದಕ್ಷಿಣೆ ಮಾಡಿ, ರಾಮನ ಜೊತೆಗಿನ ತನ್ನ ಸಖ್ಯ ದೃಢಪಡಿಸಿಕೊಳ್ಳುತ್ತಾನೆ.

ಶ್ರೀ ರಾಮಚಂದ್ರ ಜನಿಸಿದ ಇಕ್ಷ್ವಾಕು ವಂಶದ ಮೂಲ ಮಂತ್ರವೇ 'ಪ್ರಾಣ ಹೋದೀತು, ಆದರೆ ಕೊಟ್ಟ ವಚನವಲ್ಲ'. ಇನ್ನು ಇಲ್ಲಿ ಸಾಕ್ಷಾತ್ ಮರ್ಯಾದ ಪುರುಷೋತ್ತಮನೇ ವಚನ ನೀಡುವಾಗ ಇನ್ನಾವ ಸಾಕ್ಷಿ ಬೇಕಿತ್ತು? ಈ ಸಂದರ್ಭವನ್ನು ಯಾವ ರಾಮಾಯಣದಿಂದ ತೆಗೆದುಕೊಳ್ಳಲಾಗಿದೆ ಎಂಬುದನ್ನು ಯಾರಾದರೂ ತಿಳಿಸುವಿರಾ?

— ಶ್ರೀನಾಥ್ ಕೊನೇಟಿ, ಬೆಂಗಳೂರು

## ಉತ್ತಮ ಅಭಿನಯ

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಕಿಚ್ಚ ಸುದೀಪ್ ಅವರ 'ವಾರಸ್ದಾರ' ಮುಕ್ತಾಯಗೊಂಡಿದೆ. ಅದರಲ್ಲಿ ಅಭಿನಯಿಸಿದ ಎಲ್ಲಾ ಪಾತ್ರಧಾರಿಗಳು ಎಲ್ಲೂ ಚ್ಯುತಿ ಬರದಂತೆ ಅಭಿನಯಿಸಿದ್ದಾರೆ. ಅತೀ ಕಡಿಮೆ ಅವಧಿಯಲ್ಲಿ ಧಾರವಾಹಿ ಮೂಡಿಬಂದು, ಮತ್ತೊಂದು ಧಾರವಾಹಿಗೆ ಅವಕಾಶ ಕೊಟ್ಟಿದೆ.

ಕಿಚ್ಚ ಸುದೀಪ್ ನಿರ್ಮಾಣದಲ್ಲಿ ಮತ್ತೊಂದು ಧಾರವಾಹಿ ಬರಲೆಂದು ಮನೆ- ಮಂದಿಯೆಲ್ಲಾ ಕೇಳಿಕೊಳ್ಳುತ್ತಿದ್ದೇವೆ.

- ಅಂಚೆಸುಬ್ರಮಣ್ಯ, ಕೊಪ್ಪ

## ಪಾತ್ರ ಪರಿಚಯ ಇರಲಿ

ಮುಂಚಿನ ಟಿವಿ ಧಾರಾವಾಹಿಗಳಲ್ಲಿ ಅವುಗಳ ನಿರ್ದೇಶನ, ಗೀತೆ-ಸಂಗೀತ, ನಟವರ್ಗ, ತಾಂತ್ರಿಕ ವಿಭಾಗ ಎಲ್ಲರ ಹೆಸರುಗಳನ್ನೂ ಕಡ್ಡಾಯವಾಗಿ ತೋರಿಸುತ್ತಿದ್ದರು.ಆದರೆ ಈಚಿನ ದಿನಗಳಲ್ಲಿ ಹೆಚ್ಚೆಂದರೆ ನಿರ್ಮಾಪಕರ ಮತ್ತು ನಿರ್ದೇಶಕರ ಹೆಸರುಗಳನ್ನು ಮಾತ್ರ ತೋರಿಸುವ ಅಭ್ಯಾಸ ಬೆಳೆದಿದೆ. ವರ್ಷಗಳಿಂದ ಧಾರಾವಾಹಿ ನಡೆಯುತ್ತಿದ್ದರೂ ಅದರ ಮುಖ್ಯ ಪಾತ್ರಧಾರಿಗಳ ಹೆಸರುಗಳು ಯಾವ ಸಾಮಾನ್ಯ ವೀಕ್ಷಕರಿಗೂ ತಿಳಿಯಲು ಸಾಧ್ಯವಿಲ್ಲದಿರುವುದು ವಿಪರ್ಯಾಸ . ಕಲಾವಿದರಿಗಂತೂ ಈ ಅಭ್ಯಾಸ ಅನ್ಯಾಯವೇ ಸರಿ. ಚಲನಚಿತ್ರ ಪ್ರಪಂಚಕ್ಕೆ ಅಷ್ಟು ಹೆಸರು ಮತ್ತು ಪ್ರಚಾರ ಸಿಗುವಾಗ ಟಿವಿ ಕ್ಷೇತ್ರದಲ್ಲಿ ಎಲ್ಲರೂ ಮುಖ ರಹಿತರಾಗಿರಬೇಕೆಂಬುದು ಅತಾರ್ಕಿಕ ಮತ್ತು ಅಸಮರ್ಥನೀಯ.

— ಶ್ರೀನಾಥ್, ಮೈಸೂರು

## ಇದು ಕಿಲಾಡಿ ಕುಟುಂಬ!

ಝೀನ 'ಕಿಲಾಡಿ ಕುಟುಂಬ' ಬೋರ್ ಹೊಡೆಸುತ್ತಿದೆ. ನಿತ್ಯ ಅದೇ ಆರಂಭದ ವಾಕ್ಯಗಳ ನಿರೂಪಣೆ, ನವರಸ ನಾಯಕನ ಗುಣಗಾನ, ಅದೇ ಹಳಸಲು ಕಾನ್ಸೆಪ್ಟ್. ಇವನ ಹೆಂಡತಿಗೆ ಅವನು ಲೈನ್ ಹೊಡೆಯುವುದು, ಅವನ ಹೆಂಡತಿಗೆ ಇವನು ಮುತ್ತು ಕೊಡುವುದು, ನನ್ನ ಹೆಂಡತಿ ಬರುವವರೆಗೂ ನಿನ್ನ ಹೆಂಡತಿಯನ್ನು ನನ್ನೊಂದಿಗೆ ಕಳಿಸು ಎನ್ನುವುದು... ಒಟ್ಟಾರೆ ಇವರಿಗೆ ಹೇಳಲು ಬೇರೆ ವಿಷಯವೇ ಇಲ್ಲವೇ? ಅನಾಚಾರವೇ ಕಾಮಿಡಿಯೇ?

— ಕೆ.ಶ್ರೀನಿವಾಸರಾವ್, ಹರಪನಹಳ್ಳಿ